**ದಿನಾಂಕಃ 03–01–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಈ ದಿನ ನನ್ನ ಪ್ರಮಾಣಪತ್ರಿಕೆ ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆಸಿರುವ ಸಂಗತಿಗಳು ನನ್ನ ತಿಳುವಳಿಕೆ, ನಂಬಿಕೆ ಹಾಗೂ ಮಾಹಿತಿಗೆ ಇದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ ಮತ್ತು ನಾನು ಹೇಳಿ ಬರೆಸಿದ ಸಂಗತಿಗಳಾಗಿರುತ್ತದೆ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ, ಪ್ರತಿವಾದಿಯರು ಬರೆದುಕೊಟ್ಟಿರುವ ನೋಂದಾಯಿತ ಕ್ರಯ ಒಪ್ಪಂದದ ದಿಃ 31–12–19 ರ ಮೂಲ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು **ನಿಪಿ–1** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಹಾಗೂ ಪ್ರತಿವಾದಿಯರು ನೋಂದಾಯಿತ 4 ರವರು ಸಹಿ ಮಾಡಿರುತ್ತೇವೆ. ವಾದಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 1(ಎ) ಇಂದ 1(ಡಿ) ಎಂದು ಗುರುತಿಸಲಾಯಿತು. ವಾದಿ ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ 1(ಇ) ಇಂದ 1(ಟಿ) ಎಂದು ಗುರುತಿಸಲಾಯಿತು. ಸದರಿ ಕ್ರಯದ ಕರಾರು ಒಪ್ಪಂದ ಪತ್ರವಾದಾಗ ಸಾಕ್ಷಿದಾರರಾಗಿ ಸ್ವಾಮಿ ಹಾಗೂ ತೀರ್ಥಕುಮಾರ್ ಹಾಗೂ ಬೋರಲಿಂಗೇಗೌಡ ರವರ ಮಗ ಇದ್ದರು. ಪತ್ರವನು ಬಿಪ್ಲಮದಾರರಾದ ಜವರೇಗೌಡ ರವರು ಸಿದ್ದ ಪಡಿಸಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂದಿದಂತೆ ಪಹಣಿ ಪತ್ರವನ್ನು ಹಾಜರುಪಡಿಸಿರುತ್ತೇನೆ, ಅದನ್ನು **ನಿಪಿ–2** ಎಂದು ಗುರುತಿಸಲಾಯಿತು. ದಾವಾ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನೋಂದಾಯಿತ ಅಂಚೆ ಮೂಲಕ ವಕೀಲರ ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಅದರ ಕಛೇರಿ ಪ್ರತಿಯನ್ನು ನಿಪಿ 3 ಎಂದು ಗುರುತಿಸಲಾಯಿತು. ನೋಂದಾಯಿತ ಅಂಚೆ ರಸೀದಿಗಳನ್ನು ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ನೋಟೀಸ್ 1 ರಿಂದ 4 ಪ್ರತಿವಾದಿಯರಿಗೆ ಜಾರಿ ಆಗಿದ್ದು ಅವುಗಳನ್ನು ನಿಪಿ 8 ರಿಂದ 11 ಎಂದು ಗುರುತಿಸಲಾಯಿತು. ಪ್ರತಿವಾದಿಯರು ಪ್ರತ್ಯುತ್ತರವನ್ನು ನೀಡಿರುತ್ತಾರೆ. ಅದನ್ನು ಹಾಜರು ಪಡಿಸಿದ್ದು

ಅದನ್ನು ನಿಪಿ 12 ಎಂದು ಗುರುತಿಸಲಾಯಿತು. ಆದುದರಿಂದ ದಾವೆಯಲ್ಲಿ ಕೇಳಿದಂತೆ ಪರಿಹಾರ ಕೋರುತ್ತೇನೆ.

(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ